**ಒ.ಎಸ್.ನಂಬ್ರ: 362/2019 ಪಿ .ಡಬ್ಲ್ಯೂ : 1**

ದಿನಾಂಕ: 08-11-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

**ಪಾಟಿ ಸವಾಲು: ಎ.ಜಿ.ಪಿ ರವರಿಂದ**

ನನಗೆ ಓದಲು ಬರೆಯಲು ಸರಿಯಾಗಿ ಬರುವುದಿಲ್ಲ. ನನ್ನ ಮಕ್ಕಳು ಅಕ್ಷರಸ್ಥರಾಗಿರುತ್ತಾರೆ. ನಮ್ಮ ಮನೆಯಲ್ಲಿ ನಾನು ಮತ್ತು ಮಕ್ಕಳು ವಾಸವಿದ್ದೇವೆ. ನಾನು ಕೂಲಿ ಮತ್ತು ನಮ್ಮ ತಂದೆಯ ಸ್ವತಿನಲ್ಲಿ ಕೃಷಿ ಮಾಡುತ್ತೇನೆ. ಈ ದಾವೆ ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಅದರಲ್ಲಿ ಏನು ಬರೆಸಿದ್ದೇನೆ ಎಂದು ಹೇಳಲು ಆಗುವುದಿಲ್ಲ. ನನಗೆ ಸೇರಿದ ಸ್ವತ್ತುಗಳು ಎಂದರೆ ಹೊಸಂಗಡಿಯ ಸರ್ವೇ ನಂ. 166. ಅದರ ಆಕಾರ ವಿಸ್ತೀರ್ಣ ಹೇಳಲು ಆಗುವುದಿಲ್ಲ. ಅದಕ್ಕೆ ಸಂಬಂದಪಟ್ಟ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ದಾವಾ ಸ್ವತ್ತಿನಲ್ಲಿ ಗೇರು, ಮಾವು, ನಿಂಬೆ ಅನಾನಸ್ ಗಿಡಗಳು ಇರುತ್ತದೆ. ಅದನ್ನು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಅವುಗಳೆಂದರೆ ಫೋಟೋಗಳು. ನಾನು ಹೇಳಿದ ಯಾವುದೇ ಗಿಡಗಳು ನಿಪಿ 4 ರಲ್ಲಿ ಕಂಡುಬರುವುದಿಲ್ಲ. ದಾವಾ ಸ್ವತ್ತಿನ ಪಕ್ಕದಲ್ಲಿ ಅರಣ್ಯ ಇಲಾಖೆಗೆ ಸೇರಿದ ಜಾಗ ಇದೆ ಎಂದರೆ ಸರಿಯಲ್ಲ. ಹೊಸಂಗಡಿ ಗ್ರಾಮದ ದೊಡ್ಡಿನಬೇರು ಎಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಅದು ಅರಣ್ಯ ಪ್ರದೇಶವ ಎಂಬ ಮಾಹಿತಿ ನನಗೆ ಇಲ್ಲ. ದಾವಾ ಸ್ವತ್ತಿನ ಗಡಿಗಳನ್ನು ಹೇಳಲು ಆಗುವುದಿಲ್ಲ. ನಾವಿರುವ ದಾವಾ ಸ್ವತ್ತಿನ ಸರ್ವೇ ನಂಬರ್ ಗೆ ಯಾವುದೇ ಹಿಸ್ಸಾ ಇಲ್ಲ. ಸದರಿ ಸರ್ವೇ ನಂಬರ್ ನ ಒಟ್ಟು ವಿಸ್ತೀರ್ಣ ನನಗೆ ತಿಳಿದಿಲ್ಲ. ದಾವಾ ಸ್ವತ್ತಿನ ಸುತ್ತಲೂ ಯಾವುದೇ ಕಲ್ಲಿನ ಗುಪ್ಪೆ ಹಾಕಿರುವುದು ಕಂಡು ಬರುವುದಿಲ್ಲ. ದಾವಾ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ತೊಟ್ಟಿನ ಬೇರು ಮೀಸಲು ಅರಣ್ಯ ಪ್ರದೇಶದ ವ್ಯಾಪ್ತಿಗೆ ಸರ್ಕಾರದ ಅಧಿಸೂಚನೆಯ ಪ್ರಕಾರ ಒತ್ತಿಸಲುಪಟ್ಟ ಜಾಗ ಎಂದರೆ ನನಗೆ ಗೊತ್ತಿಲ್ಲ, ದಾವಾ ಸರ್ವೇ ನಂ ನಲ್ಲಿ ಒಟ್ಟು ವಿಸ್ತೀರ್ಣ ಹಿಸ್ಸೆ ಹೇಳಲು ಆಗುವುದಿಲ್ಲ. ತೊಟ್ಟಿನ ಬೇರು ಮೀಸಲು ಅರಣ್ಯ ಪ್ರದೇಶದ ಸುತ್ತಲೂ ಕಲ್ಲಿನ ಗುಪ್ಪೆಗಳನ್ನು ಹಾಕಿ ಸಂರಕ್ಷಿಸುತ್ತಿದ್ದಾರೆ ಎಂದರೆ ನಾನು ನೋಡಿಲ್ಲ. ಅದೇ ಸರ್ವೆ ನಂ 166/ಪಿ 5 ರ 122.40 ಎಕ್ರೆ ಅರಣ್ಯ ಇಲಾಖೆಯ ಸ್ವಾಧೀನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಅದರ ಸುತ್ತಲೂ ಕಲ್ಲಿನ ಗುಪ್ಪೆಗಳನ್ನು ಹಾಕಿ ಸಂರಕ್ಷಿಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಒಟ್ಟಾಗಿ 359.30 ಎಕ್ರೆ ಪ್ರದೇಶವನ್ನು ತೊಟ್ಟಿನ ಬೇರು ಮೀಸಲು ಅರಣ್ಯ ಪ್ರದೇಶ ಎಂದು ದಿಃ 27-06-1979 ರಂದು ಘೋಷಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಅದರಂತೆ ಪಹಣಿ ಪತ್ರಿಕೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ನಾನು ಹೇಳಿದ ಪ್ರದೇಶದಲ್ಲಿ ಬರುವುದಿಲ್ಲ ಎಂದರೆ ಸರಿಯಲ್ಲ. ದಾವೆಯಲ್ಲಿ ಹೇಳಿರುವಂತೆ ಯಾವುದೇ ಸ್ವತ್ತನ್ನು ಹೊಂದಿಲ್ಲದ ಕಾರಣ ಅದರ ದಾಖಲಾತಿಗಳನ್ನು ನ್ಯಾಯಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸರ್ಕಾರ ಜಮೀನನ್ನು ಕಬಳಿಸುವ ಉದ್ದೇಶದಿಂದ

ದಾಖಲೆಗಳನ್ನು ಹಾಜರುಪಡಿಸದೇ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಯಾರ ವಿರುದ್ದ ಸಲ್ಲಿಸಿದ್ದೇನೆ ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿ. ಪ್ರತಿವಾದಿಯರಿಂದ ನನ್ನ ವಿರುದ್ದ ಯಾವುದೇ ಕಾನೂನು ಬಾಹಿರ ಕೃತ್ಯ ವಾಗಿಲ್ಲ ಎಂದರೆ  ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಮೀಸಲು ಅರಣ್ಯ ಪ್ರದೇಶದ 100 ಮೀಟರ್ ವ್ಯಾಪ್ತಿಯೊಳಗೆ ಬರುವ ಕಾರಣ ಬೇರೆ ಯಾವುದೇ ಚಟುವಟಿಕೆ ಮಾಡಲು ಅವಕಾಶ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ಸದರಿ ಜಾಗದ ಅನುಭೋಗ ಅಥವಾ ಮಂಜುರಾತಿಗಾಗಿ ಅವಕಾಶ ಇಲ್ಲ ಎಂದರೆ ಸರಿಯಲ್ಲ.  ಪ್ರತಿವಾದಿಯರಿಗೆ ತೊಂದರೆ ಕೊಡುವ ದುರುದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವೆಯಲ್ಲಿ ತಿಳಿಸಿರುವಂತೆ ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ .**